# <u>ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕೊಪ್ಪಳ</u>

## ಸಿ.ಸಿ. ಸಂಖ್ಯೆ: 225/2020

**ದಿನಾಂಕಃ 01-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

| | |
|---|---|
| ಸಿಡಬ್ಲ್ಯೂ- | 04 |
| ಪಿಡಬ್ಲ್ಯೂ- | 01 |

| | |
|---|---|
| ಹೆಸರು | ಗವಿಸಿದ್ದಪ್ಪ |
| ತಂದೆ | ವೀರನಗೌಡ |
| ವಯಸ್ಸು | 38 ವರ್ಷ |
| ಕೆಲಸ | ಒಕ್ಕಲುತನ |
| ವಾಸಸ್ಥಳ | ಕೊಪ್ಪಳ |

**<u>ಮುಖ್ಯ ವಿಚಾರಣೆ : ಹಿರಿಯ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ಕೊಪ್ಪಳ ಜಮೀನು ಸರ್ವೇ ನಂ. 273/ಎ 1 ಕ್ಷೇತ್ರ 4 ಎಕರೆ ಜಮೀನನ್ನು ವಾಸಪ್ಪ ತಂದೆ ರಾಮಪ್ಪ ಕರಮುಡಿ ಇವರ ಕಡೆಯಿಂದ ನಮ್ಮ ತಂದೆ 1993-94 ರಲ್ಲಿ ಖರೀದಿಸಿದ್ದರು. 2004 ರಲ್ಲಿ ನರಸಪ್ಪ ತಂದೆ ವೆಂಕಪ್ಪ ಕರಮುಡಿ ಮಕ್ಕಳು 5 ಗಂಡು 2 ಹೆಣ್ಣು ನಮ್ಮಲ್ಲಿಗೆ ಬಂದು ತಮ್ಮ ಸರ್ವೇ ನಂ.271/1 ಕ್ಷೇತ್ರ 5 ಎಕರೆ ನಿಮ್ಮ ಹೆಸರಿಗೆ ಆಗಿದೆ, ನಿಮ್ಮ ಸರ್ವೇ ನಂಬರ್ ನಮ್ಮ ಹೆಸರಿಗೆ ಆಗಿದೆ ಎಂದರು.

2. ನಂತರ ತಹಶೀಲ್ದಾರ ಕಚೇರಿಗೆ ಹೋಗಿ ನಮ್ಮ ಸರ್ವೇ ನಂಬರ್ ಅವರಿಗೆ ಬಿಟ್ಟು ಕೊಟ್ಟೆವು ಅವರ ಸರ್ವೇ ನಂಬರ್ ನಮಗೆ ಬಿಟ್ಟುಕೊಟ್ಟರು. ಇವತ್ತಿನವರೆಗೂ ಸರ್ವೇ ನಂ. 271/1 ನಮ್ಮ ತಂದೆ ಹೆಸರಿಗೆ ಇದೆ. 273/ಎ 1 ನರಸಪ್ಪನ ಮಕ್ಕಳಿಗೆ ಹೊಯಿತು. 2018 ರಲ್ಲಿ 271/1 ನಮ್ಮ ತಂದೆ ನನ್ನ ಹೆಸರಿಗೆ ದಾನ ಪತ್ರ ಮಾಡಿದರು.

3. 2017 ರಲ್ಲಿ ಶರಣಪ್ಪ ಹನಮಂತಪ್ಪ ಗಾಳಿಯವರು ತಮ್ಮ ವಕೀಲರ ಮೂಲಕ ನಮಗೆ ಒಂದು ನೋಟಿಸ್ ಕೊಟ್ಟರು. ಪಹಣಿ ಪತ್ರಿಕೆಯಲ್ಲಿ ನರಸಪ್ಪ ತಂದೆ ಯಂಕಪ್ಪ ಗಾಳಿ ಅಂತಾ ನೋಟಿಸ್ಸ ಬಂತು. ಅದರಲ್ಲಿ ನರಸಪ್ಪ ತಂದೆ ಯಂಕಪ್ಪ ಗಾಳಿ ಅಂತಾ ನೋಟಿಸ್ ಕೊಟ್ಟರು. ಅದನ್ನು ತೆಗೆದುಕೊಂಡು ತಹಶೀಲ್ದಾರ ಕಚೇರಿಗೆ ಬಂದೆವು. 2017 ರಲ್ಲಿ ವರ್ಗಾವಣೆ ಮಾಡಲು ಶರಣಪ್ಪ ಗಾಳಿ ನೋಟಿಸು ಕೊಟಿಟದ್ದಾರೆ ಎಂದು ನೀವು ದಾಖಲಾತಿ ತೆಗೆದುಕೊಂಡು ಬಾ ಎಂದರು. ನಾವು ದಾಖಲಾತಿ ತೆಗೆದುಕೊಂಡು ಹೋಗಿ ತಹಶೀಲ್ದಾರಗೆ ಕೊಟ್ಟೆವು. ಅವರು ತಮ್ಮ ಕಚೇರಿ ದಾಖಲೆ ನಾವು ಹಾಜರು

ಮಾಡಿದ ದಾಖಲಾತಿ ಟ್ಯಾಲಿ ಮಾಡಿ, ಈ ಗಾಳಿ ಅಂತಾ ಬಂದಿದ್ದು ಯಾವುದು ಇಲ್ಲ ಅಂದರು, ಅವರು ನೊಟಿಸ್ಸು ಕೊಟ್ಟಿದ್ದಾರೆ ಅಂತಾ ಹೇಳಿದೆ. ಅದನ್ನು ನೋಡಿ ತಹಶಿಲ್ದಾರವರು ಇವರು ಇನ್ನೊಬ್ಬರ ಆಸ್ತಿ ಕಬಳಿಸಲು ಬಂದಿದ್ದಾನೆ ಎಂದರು. ಶರಣಪ್ಪ ಗಾಳಿ ಇವರು ತಮಗೆ ವರ್ಗಾವಣೆ ಮಾಡಿಕೊಡಲು ನೊಟಿಸ ಕೊಟ್ಟಿದ್ದಾರೆ. ಇದಾದ ನಂತರ 2020 ರಲ್ಲಿ ಪೊಲೀಸ್ ಠಾಣೆಯಿಂದ ಕರೆ ಬಂದಿತು. ಶರಣಪ್ಪ ದಾಖಲಾತಿ ತಿದ್ದಿ ಫೊರ್ಜರಿ ಮಾಡಿದ್ದಾನೆ ಪೊಲೀಸರಿಗೆ ತಹಶೀಲ್ದಾರ ದೂರು ಕೊಟ್ಟಿದ್ದಾರೆ ಎಂದು ಪೊಲೀಸರು ಹೇಳಿದರು. ಆಗ ಪೊಲೀಸರಿಗೆ ದಾಖಲಾತಿ ತೆಗೆದುಕೊಂಡು ಹೋಗಿ ಕೊಟ್ಟೆವು. ಶಿರಸ್ತೆದಾರರು ಪೊಲೀಸರಿಗೆ ತಮ್ಮ ದಾಖಲೆ ಕೊಟ್ಟರು. ಗಾಳಿ ಅಂತಾ ತಿದ್ದಿ ಕಲರ್ ಪ್ರೀಂಟ್ ಹಾಕಿದ್ದು ಕೊಟ್ಟರು. ಅದಕ್ಕೆ ನಾನು ಇವರು ತಪ್ಪು ಮಾಡಿದ್ದಾರೆ ಮೋಸ ಮಾಡಿದ್ದಾರೆ ಸಾಕ್ಷಿಯಾಗುತ್ತೇನೆ ಎಂದೆ.

3. 2020 ರಲ್ಲಿ ಶರಣಪ್ಪ ಇವರು ಎಸಿ ಕಚೇರಿಯಲ್ಲಿ ಪ್ರಕರಣ ದಾಖಲು ಮಾಡಿದ್ದರು. ದಾಖಲಾತಿ ತಿದ್ದುಪಡೆ ಆಗಿದೆ ವಾಪಸ್ಸು ತೆಗೆದುಕೊಳ್ಳುತ್ತೇವೆ ಅಂತಾ ವಕೀರಲ ಮೂಲಕ ತಕರಾರು ಹಾಕಿದರು. ದಾಖಲಾತಿ ನಾನು ತಿದ್ದಿಲ್ಲ ವಕೀರು ತಿದ್ದಿದ್ದಾರೆ ಅಂತಾ ಶರಣಪ್ಪ ಗಾಳಿಯವರು ತಹಶೀಲ್ದಾರಗೆ ನೊಟಿಸ್ಸು ಕೊಟ್ಟಿದ್ದಾರೆ. ಮೂಲ ಪ್ರತಿ ಪೊಲೀಸ ಠಾಣೆಯಲ್ಲಿವೆ. ಕೇಳಿದರೆ ಅವರು ಕೊಡುತ್ತಿಲ್ಲಾ. ಕಾರಣ ಅವರಿಗೆ ಶಿಕ್ಷೆ ಆಗಲು ಕೊರುತ್ತೇನೆ. ಈ ವಿಷಯ ಪೊಲೀಸರ ಮುಂದೆ ಹೇಳಿದ್ದೇನೆ. ತಿದ್ದುಪಡೆ ಮಾಡಿದ ದಾಖಲೆ, ನೊಟಿಸ, ತಹಶೀಲ್ದಾರರವರ ಆದೇಶ ನೋಡಿದರೆ ಗುರುತಿಸುತ್ತೇನೆ.

4. ಕೊಪ್ಪಳ ಜಮೀನು ಸರ್ವೆ ನಂ 271/1 ಕ್ಷೇತ್ರ 5 ಎಕರೆ ಪಿಕೆ 3 ಗುಂಟೆ ಇದರ 1973-74 ರಿಂದ 2000-2001 ನೇ ಸಾಲಿನ ಪಹಣಿ ಪತ್ರಿಕೆ ತನಿಖಾಧಿಕಾರಿಗೆ ನಾನೇ ಕೊಟ್ಟಿದ್ದೇನೆ ಎಂದು ಹೇಳಿರುತ್ತಾರೆ ಅದನ್ನು ನಿಪಿ 1 ಎಂದು ಗುರುತಿಸಲಾಯಿತು.

**<u>ಮುಂದುವರೆದ ಮುಖ್ಯ ವಿಚಾರಣೆಗಾಗಿ ಮುಂದೂಡಲಾಯಿತು.</u>**

**<u>(ಸಾಕ್ಷಿಯು ನುಡಿದಂತೆ ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)</u>**

ಓ.ಹೇ.ಕೇ. ಸರಿ ಇದೆ.
ಸಹಿ/-
**ಸಿ.ಜೆ.ಎಮ್., ಕೊಪ್ಪಳ.**